ದಿಃ 01-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆ** : ಪ್ರತಿವಾದಿಯ ಪರ ಶ್ರೀ ಡಿ ಕೆ ಜೆ ವಕೀಲರಿಂದ.

ಈ ದಾವೆಯಲ್ಲಿ ನಾನು ಪ್ರತಿವಾದಿ ಆಗಿದ್ದು ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ದಿನಾಂಕ 20-02-1984 ರ ನೋಂದಾಯಿತ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 8 ಎಂದು, ಸಿ ಟಿ ಎಸ್ ನಂಬರ 2773 ರ ರೂಲ್ಡ್ ಕಾರ್ಡ ಹಾಗೂ ಸದರಿ ಆಸ್ತಿಯ ನಕ್ಷೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಡಿ 9 ಎಂದು, ಸಿ ಟಿ ಎಸ್ ನಂಬರ 2778 ರ ಕಂಬಾಯಿಂಡ್ ನಕ್ಷೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ 10 ಎಂದು, 7 ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ 11 ರಿಂದ 17 ಎಂದು, ಜುಲೈ 2010 ರಿಂದ ಪೆಬ್ರುವರಿ 2024 ರ ವರೆಗೆ ವಿದ್ಯುತ್ ಬಿಲ್ ಅನ್ನು ತುಂಬಿದ್ದರ ಕುರಿತು ಸ್ಟೇಟ ಮೆಂಟ್ ಅನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಡಿ 18 ಎಂದು, ಆಸ್ತಿ ಸಂಖ್ಯೆ ಬಿ-643 ಟ್ಯಾಕ್ಸ್ ಡಿಮ್ಯಾಂಡ್ ರಜಿಸ್ಟರ ನ ದೃಢಿಕೃತ ನಕಲನ್ನು (ಒಟ್ಟು ನಾಲ್ಕು ಹಾಳೆಗಳು) ಹಾಜರುಪಡಿಸಿದ್ದು ಅದನ್ನು **ಪುರಾವೆಗೊಳಪಟ್ಟು** ನಿಡಿ 19 ಎಂದು, ಪಟ್ಟಣ ಪಂಚಾಯತ ಹಳಿಯಾಳ ರವರು ದಿನಾಂಕ 15-06-2010 ರಂದು ವಿದ್ಯುತ ಸೌಲಭ್ಯಕ್ಕಾಗಿ ನೀಡಿದ ನಿರಾಕ್ಷೇಪಣಾ ಪತ್ರದ ಅಟೆಸ್ಟೆಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ಪುರಾವೆಗೊಳಪಟ್ಟು** ನಿಡಿ 20 ಎಂದು, ನನ್ನ ಮಗನ ಹೆಸರಿನಲ್ಲಿರುವ ಜಿ ಎಸ್ ಟಿ ರಜಿಸ್ಟ್ರೇಷನ್ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 21 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** ವಾದಿಯ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.